*<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>*
*<u>ನ್ಯಾಯಾಲಯದಲ್ಲಿ — ಜಗಳೂರು</u>*

ಉಪಸ್ಥಿತರುಃ ಮಹೇಂದ್ರ ಎಂ. ಬಿ.ಎ. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ಜ ಗ ಳೂ ರು.

*<u>ದಿನಾಂಕಃ 25 ನೇ ಜನವರಿ 2019 ನೇ ಇಸವಿ</u>*
*<u>ಅಸಲು ದಾವೆ ಸಂಖ್ಯೆ 87/2018</u>*

ವಾದಿಃ ಟಿ. ರಾಮಣ್ಣ ಬಿನ್ ಸಣ್ಣ ತಿಪ್ಪಯ್ಯ
(ಪ್ರತಿನಿಧಿಸುವವರು ಶ್ರೀ ಬಿ.ಎಸ್., ವಕೀಲರು)

ಃಃವಿರುದ್ಧ ಃಃ

ಪ್ರತಿವಾದಿಃ ಶ್ರೀ ರಾಮ ಬಿನ್ ರಾಮಾಂಜನೇಯ.
(ಪ್ರತಿನಿಧಿಸುವವರು ಶ್ರೀ ಕೆ.ಎಂ.ಬಿ., ವಕೀಲರು)

<u>ಃಃಮಧ್ಯಂತರ ಅರ್ಜಿ ಸಂಖ್ಯೆ I ರ ಮೇಲಿನ ಆದೇಶ ಃಃ</u>

ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಹಾಗೂ ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ I ನ್ನು ಸಲ್ಲಿಸಿ ಪ್ರತಿವಾದಿ ಮತ್ತು ಅವರ ಕಡೆಯವರು ದಾವಾ ಸ್ವತ್ತಿನ ವಾದಿಯ ಸ್ವಾಧೀನಾನುಭವಕ್ಕೆ ಅಡ್ಡಿ-ಆತಂಕವನ್ನು ಉಂಟುಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕಾಗಿ ಕೋರಿರುತ್ತಾರೆ.

2. ವಾದಿಯು ಮಧ್ಯಂತರ ಅರ್ಜಿಯ ಜೊತೆಗೆ ಪ್ರಮಾಣಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ಸದರಿ ಪ್ರಮಾಣಪತ್ರದಲ್ಲಿ ವಾದಿಯು ದಾವಾ ಸ್ವತ್ತು ತನಗೆ ಪಿತ್ರಾರ್ಜಿತವಾಗಿ

ಬಂದಿದ್ದು ಅದು ಮನೆ ಮತ್ತು ಖಾಲಿ ನಿವೇಶನ ಆಗಿರುತ್ತದೆ. ವಾದಿಯು 11 ಇಂಟು 21 ಮೊಳ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿದ್ದು ಮನೆಯ ಪಶ್ಚಿಮ ದಿಕ್ಕಿನಲ್ಲಿ ವಾದಿಗೆ ಸೇರಿದ 22 ಇಂಟು 36 ಅಡಿಗಳು ಖಾಲಿ ಜಾಗ ಇರುತ್ತದೆ. ವಾದಿಯು ಸದರಿ ಮನೆ ಮತ್ತು ಖಾಲಿ ಜಾಗದ ಮಾಲೀಕರು ಆಗಿರುತ್ತಾರೆ. ಸರ್ಕಾರಕ್ಕೆ ಕಂದಾಯವನ್ನು ಸಹಾ ಕಟ್ಟಿಕೊಂಡು ಬಂದಿರುತ್ತಾರೆ. ಸದರಿ ಖಾಲಿ ಜಾಗದಲ್ಲಿ ವಾದಿಯು ದನದ ಕೊಟ್ಟಿಗೆಯನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ಸದರಿ ದನದ ಕೊಟ್ಟಿಗೆಯನ್ನು ತೆರುವುಗೊಳಿಸಿ ಸರ್ಕಾರದಿಂದ ಅನುದಾನ ಪಡೆದು ಮನೆ ಕಟ್ಟಲು ವಾದಿಯು ಪ್ರಾರಂಭಿಸಿದಾಗ ಪ್ರತಿವಾದಿಯು ಇದಕ್ಕೆ ತಡೆ ಮಾಡಿ ಅಡ್ಡಿ ಪಡಿಸಿರುತ್ತಾರೆ. ಈ ಬಗ್ಗೆ ವಾದಿಯು ಜಗಳೂರು ಪೋಲೀಸ್ ಠಾಣೆಯಲ್ಲಿ ಪ್ರತಿವಾದಿಯ ವಿರುದ್ಧ ದೂರು ನೀಡಿದ್ದು, ಅದು ಸಿವಿಲ್ ಪ್ರಕರಣ ಆಗಿರುವುದರಿಂದ ನ್ಯಾಯಾಲಯದಲ್ಲಿ ಬಗೆಹರಿಸುವಂತೆ ಪೋಲೀಸರು ತಿಳಿಸಿರುತ್ತಾರೆ. ಪ್ರತಿವಾದಿಗೆ ದಾವಾ ಸ್ವತ್ತಿನ ಸಂಬಂಧವಾಗಿ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಈ ರೀತಿ ಅಡ್ಡಿ-ಆತಂಕವನ್ನು ಉಂಟು ಮಾಡಿರುತ್ತಾರೆ. ಆದ್ದರಿಂದ ಈ ಮಧ್ಯಂತರ ಅರ್ಜಿ ಸಂಖ್ಯೆ I ನ್ನು ಸಲ್ಲಿಸಿದ್ದು, ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

3. ಮಧ್ಯಂತರ ಅರ್ಜಿ ಸಂಖ್ಯೆ 1 ಕ್ಕೆ ಪ್ರತಿವಾದಿಯು ತನ್ನ ತಕರಾರನ್ನು ಸಲ್ಲಿಸಿದ್ದು, ವಾದಿಯು ದಾವಾ ಸ್ವತ್ತಿನ ಮಾಲೀಕರಾಗಿರುವುದಿಲ್ಲವೆಂದು ಮತ್ತು ಸ್ವಾಧೀನದಲ್ಲಿರುವುದಿಲ್ಲವೆಂದು ವಾದಿಯು ದಾವಾ ಸ್ವತ್ತನ್ನು ಹೇಗೆ ಪಡೆದಿರುತ್ತಾರೆ ಎಂದು ತನ್ನ ಅರ್ಜಿಯಲ್ಲಿ ಹೇಳದೇ ಇರುವುದರಿಂದ ವಾದಿಯ ಅರ್ಜಿಯು ಊರ್ಜಿತವಾಗಿರುವುದಿಲ್ಲವೆಂದು, ಆದ್ದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಅದೇ ರೀತಿ ಪ್ರತಿವಾದಪತ್ರವನ್ನು ಈ ಮಧ್ಯಂತರ ಅರ್ಜಿಯ ತಕರಾರಿಗೆ ಒಂದು ಭಾಗವಾಗಿ ಪರಿಗಣಿಸಬೇಕಾಗಿ ಕೋರಿರುತ್ತಾರೆ. ಆದ್ದರಿಂದ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದಪತ್ರವನ್ನು ಈ ಸಂದರ್ಭದಲ್ಲಿ ನೋಡಬೇಕಾಗಿರುತ್ತದೆ. ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ದಾವಾ ಸ್ವತ್ತು ಮೂಲತಃ ಸರ್ಕಾರದ ಆಸ್ತಿಯಾಗಿದ್ದು, 1962-63 ರಲ್ಲಿ ಸಾರ್ವಜನಿಕ ಹರಾಜಿನಲ್ಲಿ ಪ್ರತಿವಾದಿಯ ಅಜ್ಜನಾದ ಜುಗುಲು ಹನುಮಂತಪ್ಪರವರು ಪಡೆದುಕೊಂಡಿರುತ್ತಾರೆ. ಸದರಿ ಆಸ್ತಿ ಸೈಟ್ ನಂಃ 1 ವಿಸ್ತೀರ್ಣ 8 ಇಂಟು 8 ಗಜ

ಮತ್ತು ಸೈಟ್ ನಂಃ 2 ವಿಸ್ತೀರ್ಣ 8 ಇಂಟು 8 ಗಜ ಆಗಿರುತ್ತದೆ. ಇದಕ್ಕೆ ಚೆಕ್ಕುಬಂಧಿ ಪೂರ್ವಕ್ಕೆ ವಾದಿಯರ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಓಬಣ್ಣರವರ ಮನೆ ಮತ್ತು ರಸ್ತೆ, ದಕ್ಷಿಣಕ್ಕೆ ನಾಗೇಂದ್ರಪ್ಪ ಮತ್ತು ಭೀಮಪ್ಪರವರ ಮನೆ ಇರುತ್ತದೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯು ಸ್ವಾಧೀನಾನುಭವದಲ್ಲಿ ಇರುತ್ತಾರೆ. ಅಸಲು ದಾವೆ ಸಂಖ್ಯೆ65/2010 ರ ದಾವೆಯ ತೀರ್ಪು ದಾವಾ ಸ್ವತ್ತಿಗೆ ಆಗಲೀ ಅಥವಾ ಪ್ರತಿವಾದಿಯ ಸ್ವತ್ತಿಗೆ ಆಗಲೀ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ವ್ಯವಸಾಯ ಸಾಮಾಗ್ರಿಗಳನ್ನು ಸಂಗ್ರಹಿಸಿ ಮತ್ತು ದನಕರುಗಳನ್ನು ಕಟ್ಟಲು ಉಪಯೋಗಿಸುತ್ತಿರುತ್ತಾರೆ. ವಾದಿಯು ತನ್ನ ಮಧ್ಯಂತರ ಅರ್ಜಿಯ ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ. ವಾದಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಆದರೂ ಸಹಾ ಪ್ರತಿವಾದಿಗೆ ತೊಂದರೆ ಕೊಡಲು ವಾದಿಯು ಮಧ್ಯಂತರ ಅರ್ಜಿಯನ್ನು ಮತ್ತು ದಾವೆಯನ್ನು ಸಲ್ಲಿಸಿದ್ದು, ಆದ್ದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನಿಸಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ವಾದಿಯರು ಮೇಲ್ನೋಟಕ್ಕೆ ರುಜುವಾತು ಆಗುವ ಪ್ರಕರಣ ಹೊಂದಿರುತ್ತಾರೆಯೇ ?
2. ನ್ಯಾಯದ ಅನುಕೂಲತೆಯ ಒಲವು ವಾದಿಯರ ಪರವಾಗಿ ಇದೆಯೇ?
3. ಮಧ್ಯಂತರ ಅರ್ಜಿ ಸಂಖ್ಯೆI ನ್ನು ಪುರಸ್ಕರಿಸದಿದ್ದರೆ ವಾದಿಗೆ ತುಂಬಲಾರದ ನಷ್ಟ ಮತ್ತು ಕ್ಷತಿ ಉಂಟಾಗುವುದೆ?
4. ಮಾಡುವ ಆದೇಶ ಏನು ?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮಧ್ಯಂತರ ಅರ್ಜಿ ಸಂಖ್ಯೆ I ಇದಕ್ಕೆ ತಕರಾರು , ವಾದಪತ್ರ, ಉಭಯ ಪಕ್ಷಗಾರರು ಹಾಜರುಪಡಿಸಿರುವ ದಸ್ತಾವೇಜು ಮತ್ತು ಪ್ರತಿವಾದಪತ್ರ ಹಾಗೂ ಇತ್ಯಾದಿ ಸಂಗತಿಗಳನ್ನು ಪರಿಶೀಲಿಸಿ ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ನಂಃ 1 ರಿಂದ 3 ಸಕರಾತ್ಮಕವಾಗಿ

ಅಂಶ ನಂಃ 2 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ,

ಃಃ ಕಾ ರ ಣ ಗ ಳುಃಃ

7. ಅಂಶ ನಂಃ 1 ರಿಂದ 3ಃ ಈ ಮೂರು ಅಂಶಗಳಿಗೆ ಚರ್ಚಿಸಲಾಗಿರುವ ಕಾರಣಗಳು ಒಂದೇ ಆಗಿರುವುದರಿಂದ ಇವುಗಳ ಪುನರಾವರ್ತನೆಯನ್ನು ತಡೆಯುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

8. ವಾದಿ ಪ್ರಕಾರ ದಾವಾ ಸ್ವತ್ತು ತನ್ನ ಪಿತ್ರಾರ್ಜಿತ ಸ್ವತ್ತು ಆಗಿದ್ದು, ಸದರಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಸಿಕೊಂಡು ಮತ್ತು ಉಳಿದ ಜಾಗದಲ್ಲಿ ಕೊಟ್ಟಿಗೆಯನ್ನು ನಿರ್ಮಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುವುದಾಗಿ ಸದರಿ ಕೊಟ್ಟಿಗೆಯನ್ನು ತೆರವುಗೊಳಿಸಿ ಸರ್ಕಾರದಿಂದ ಮನೆಯನ್ನು ಮಂಜೂರು ಮಾಡಿಕೊಂಡು ಮನೆಯನ್ನು ಕಟ್ಟುತ್ತಿರುವುದಾಗಿ ಪ್ರತಿವಾದಿಯು ಮನೆಯನ್ನು ಕಟ್ಟಲು ಅಡ್ಡಿ ಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಆದರೆ ಈ ಸಂಗತಿಗಳನ್ನು ಪ್ರತಿವಾದಿಯು ಅಲ್ಲಗಳೆದು ದಾವಾ ಸ್ವತ್ತು ಮೂಲತಃ ಸರ್ಕಾರದ ಸ್ವತ್ತು ಆಗಿದ್ದು, ತನ್ನ ಅಜ್ಜನಿಗೆ ಬಂದ ಸ್ವತ್ತು ಆಗಿರುತ್ತದೆ. ಆ ಪ್ರಕಾರವಾಗಿ ಪ್ರತಿವಾದಿಯು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ತಿಳಿಸಿರುತ್ತಾರೆ.

9. ವಾದಿಯು ಹಾಜರು ಪಡಿಸಿರುವ ದಸ್ತಾವೇಜನ್ನು ಪರಿಶೀಲಿಸಿದಾಗ, ಅಸಲು ದಾವೆ ಸಂಖ್ಯೆ 65/2002 ರ ತೀರ್ಪಿನ ದೃಢೀಕೃತ ಪ್ರತಿಯನ್ನು ಮತ್ತು ಸದರಿ ದಾವೆಯ ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಹಾಗೆಯೇ ಕರ ಆಕರಣೆಯ ರಿಜಿಸ್ಟರ್ ಗಳ ಉತಾರಗಳು , ಋಣಭಾರರಾಹಿತ್ಯ ಪ್ರಮಾಣಪತ್ರ ಹಾಗೂ ಕಂದಾಯ ರಶೀದಿಗಳ ದೃಢೀಕರಣ ಪ್ರತಿಗಳು ಇವುಗಳನ್ನು

ಹಾಜರುಪಡಿಸಿರುತ್ತಾರೆ.

10. ಪ್ರತಿವಾದಿಯು ದಾಖಲಾತಿ ಪಟ್ಟಿಯ ಜೊತೆಗೆ ಅಸೆಸ್‌ಮೆಂಟ್ ಎಕ್ಸಟ್ರ್ಯಾಕ್ಟನ್ನು , ಕಂದಾಯ ರಶೀದಿ ಇವುಗಳನ್ನು ಹಾಜರುಪಡಿಸಿರುತ್ತಾರೆ.

11. ಈ ಹಂತದಲ್ಲಿ ನ್ಯಾಯಾಲಯವು ದಾವೆಯ ಗುಣಗಳ ಬಗ್ಗೆ ಯಾವುದೇ ವಿಚಾರಣೆ ಮಾಡಲು ಸಾಧ್ಯವಿಲ್ಲ ಕೇವಲ ದಾವೆಯು ಮೇಲ್ನೊಟಕ್ಕೆ ವಾದಿಯ ಪರವಾಗಿದೆಯೇ ಎಂಬುವುದನ್ನು ಮಾತ್ರ ನೊಡಬೇಕಾಗಿರುತ್ತದೆ ಮತ್ತು ಮೇಲ್ನೊಟದ ಮಾಲೀಕತ್ವವನ್ನು ನೋಡದೇ ಮೇಲ್ನೊಟದ ದಾವೆಯ ಬಗ್ಗೆ ಮಾತ್ರ ನೋಡಬೇಕಾಗುತ್ತದೆ ತಾತ್ಕಾಲಿಕ ತಡೆಯಾಜ್ಞೆ ನೀಡಲು ಇರುವ ಅತಿ ಮುಖ್ಯ ತತ್ವವೆಂದರೆ, ನ್ಯಾಯಾಲಯವು ತಾತ್ಕಾಲಿಕ ತಡೆಯಾಜ್ಞೆ ಅರ್ಜಿಯನ್ನು ತೀರ್ಮಾನಿಸಬೇಕಾದರೆ , ನ್ಯಾಯಾಲಯವು ಮೇಲ್ನೋಟಕ್ಕೆ ಕಾಣುವ ಮಾಲೀಕತ್ವವನ್ನು ನೋಡದೇ ಮಧ್ಯಂತರ ಪರಿಹಾರವನ್ನು ನೀಡಲು ಮೇಲ್ನೋಟಕ್ಕೆ ಸಾಭೀತಾಗುವ ಅಂಶಗಳ ಬಗ್ಗೆ ಮುಖ್ಯವಾಗಿ ನೋಡಬೇಕಾಗುತ್ತದೆ.

12. ಪ್ರಾಥಮಿಕ ಮಧ್ಯಂತರ ಪರಿಹಾರವನ್ನು ಕೊಡುವ ಪ್ರಮುಖ ಉದ್ದೇಶವೇನೆಂದರೆ, ಪಕ್ಷಗಾರರ ಕಾನೂನುಬದ್ಧ ಹಕ್ಕುಗಳು ತೀರ್ಮಾನವಾಗುವವರೆಗೆ ಮತ್ತು ಪಕ್ಷಗಾರರ ಕ್ಲೇಮುಗಳು ತೀರ್ಮಾನವಾಗುವವರೆಗೆ ಆ ಹಕ್ಕುಗಳು ಮತ್ತು ಕ್ಲೇಮುಗಳನ್ನು ರಕ್ಷಣೆ ಮಾಡುವುದಾಗಿದೆ. ತಾತ್ಕಾಲಿಕ ನಿರ್ಬಂಧಕಾಜ್ಞೆ ಕೊಡುವ ಉದ್ದೇಶ ಭವಿಷ್ಯದ ಸಮಸ್ಯೆಗಳನ್ನು , ಪಕ್ಷಗಾರರ ಮೇಲೆ ಆಗುವ ಹಾನಿಯನ್ನು ತಡೆಗಟ್ಟುವುದಾಗಿರುತ್ತದೆ.

13. ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಮಾಡುವ ಅಧಿಕಾರ ನ್ಯಾಯಾಲಯದ ವಿವೇಚನೆಗೆ ಬಿಟ್ಟದ್ದಾಗಿರುತ್ತದೆ. ಆ ವಿವೇಚನೆಯನ್ನು ಸಕಾರಣದಿಂದ ನ್ಯಾಯಿಕವಾಗಿ ಕಾನೂನುಬದ್ಧ ತತ್ವಗಳ ಮೂಲಕ ಚಲಾಯಿಸುವುದು ಬಹಳ ಮುಖ್ಯವಾಗಿರುತ್ತದೆ. ಸದರಿ ಆದೇಶವನ್ನು ಪ್ರತಿವಾದಿಯರಿಗೆ ತೊಂದರೆಯಾಗದ ರೀತಿಯಲ್ಲಿ ಚಲಾಯಿಸಬೇಕಾಗುತ್ತದೆ.

14. ವಾದಿಯು ಮುಖ್ಯವಾಗಿ ಮೇಲ್ನೋಟಕ್ಕೆ  ಸಾಭೀತಾಗುವ ರೀತಿಯಲ್ಲಿ ತಮ್ಮ ಕ್ಲೇಮ್‌ನ್ನು ಮಾಡಬೇಕಾಗುತ್ತದೆ. ಇದು ಬಹಳ ಮುಖ್ಯ  ನಿಯಮವಾಗಿರುತ್ತದೆ. ನ್ಯಾಯಾಲಯಕ್ಕೆ ಈ ದಾವೆ ಬಲವಾಗಿದ್ದು , ವಿಚಾರಣೆಗೆ ಯೋಗ್ಯವಾಗಿದೆ ಎಂದು ಕಂಡುಬರಬೇಕಾಗುತ್ತದೆ.

15. ಈ ಮೇಲ್ಕಂಡ ತತ್ವಗಳನ್ನು ಆಧರಿಸಿ ವಾದಿಯು ಸಲ್ಲಿಸಿರುವ ದಾವೆಯನ್ನು ಪರಿಶೀಲಿಸಿದಾಗ, ವಾದಿಯು ಈ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.  ಈ ಹಂತದಲ್ಲಿ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವರೇ ಎಂಬ ಬಗ್ಗೆ ಮೋಲ್ನೋಟಕ್ಕೆ ನೋಡಬೇಕಾಗಿರುತ್ತದೆ.  ವಾದಿಯು  ಸಲ್ಲಿಸಿರುವ ದಾಖಲಾತಿ ಪ್ರಕಾರ ದಾವಾ ಸ್ವತ್ತಿನ  ಖಾತೆಯು ವಾದಿಯ ಹೆಸರಿನಲ್ಲಿ ಇರುತ್ತದೆ. ಕಂದಾಯ ದಾಖಲೆಗಳು  ವಾದಿಯ ಹೆಸರಿನಲ್ಲಿ ಇರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಋಣಭಾರರಾಹಿತ್ಯ  ಪ್ರಮಾಣಪತ್ರದಲ್ಲೂ  ಸಹ ವಾದಿಯ ಹೆಸರು ನಮೂದು ಇರುತ್ತದೆ.  ವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1990 ರಿಂದಲೂ ಕಂದಾಯ ಪಾವತಿ ಮಾಡುತ್ತಿರುವ ಬಗ್ಗೆ ತಿಳಿದು ಬರುತ್ತದೆ.  ಪ್ರತಿವಾದಿಯ ಪ್ರಕಾರ ದಾವಾ ಸ್ವತ್ತು ಸರ್ಕಾರದ ಆಸ್ತಿಯಾಗಿದ್ದು, 1962-63 ರಲ್ಲಿ ಸಾರ್ವಜನಿಕ ಹರಾಜಿನಲ್ಲಿ ತನ್ನ ಅಜ್ಜ ಜುಗುಲು ಹನುಮಂತಪ್ಪ ಬಿನ್ ಲೇಟ್ ಸಂಜಯಪ್ಪ ರವರು ಖರೀದಿ ಮಾಡಿರುತ್ತಾರೆಂದು ತಿಳಿಸಿರುತ್ತಾರೆ ಮತ್ತು ಮುಂದುವರೆದು ಸೈಟ್ ನಂಃ 1 ವಿಸ್ತೀರ್ಣ 8 ಇಂಟು 8 ಗಜ , ಸೈಟ್ ನಂಃ 2 ವಿಸ್ತೀರ್ಣ 8 ಇಂಟು 8 ಗಜ ಎಂದು ಹೇಳಿರುತ್ತಾರೆ.  ಆದರೆ ದಾವಾ ಸ್ವತ್ತಿನಲ್ಲಿ ನಮೂದು ಆಗಿರುವ  ಖಾತೆ ನಂಃ ಬೇರೆ ಆಗಿರುತ್ತದೆ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಗೂ ದಾವಾ ಸ್ವತ್ತಿನಲ್ಲಿ  ನಮೂದಿಸಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇರುತ್ತದೆ.

16. ಪ್ರತಿವಾದಿ ಹಾಜರುಪಡಿಸಿರುವ  ದಾಖಲೆಯಲ್ಲಿ ಖಾತೆ ನಂಃ 18 ಎಂದು ನಮೂದು ಇರುತ್ತದೆ. ದಾವಾ ಸ್ವತ್ತಿನ  ಶೆಡ್ಯೂಲ್ ನಲ್ಲಿ  ಖಾತೆ ನಂಃ 20 ಎಂದು ನಮೂದು ಇರುತ್ತದೆ.  ಪ್ರತಿವಾದಿಯು ಹೇಳುವ ಆಸ್ತಿಗೂ ಮತ್ತು ದಾವಾ ಸ್ವತ್ತಿಗೂ ಮೇಲ್ನೋಟಕ್ಕೆ ವ್ಯತ್ಯಾಸ ಕಂಡುಬರುತ್ತದೆ. ಪ್ರತಿವಾದಿಯು ದಾವಾ ಸ್ವತ್ತು

ತನ್ನ ಅಜ್ಜನು ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರು ಹಾಜರು ಪಡಿಸಿರುವ ದಾಖಲೆಗಳಲ್ಲಿ ಮೇಲ್ನೋಟಕ್ಕೆ ಬೇರೆ ಬೇರೆ ಆಸ್ತಿಗಳು ಎಂಬ ಬಗ್ಗೆ ತಿಳಿದು ಬರುತ್ತದೆ. ಈ ಬಗ್ಗೆ ಉಭಯ ಪಕ್ಷಗಾರರ ವಿಚಾರಣೆ ಆಗಬೇಕಾಗಿರುತ್ತದೆ. ಈ ಹಂತದಲ್ಲಿ ಕೇವಲ ಮೋಲ್ನೋಟದ ದಾವೆಯನ್ನು ಮಾತ್ರ ನೋಡಬೇಕಾಗಿರುತ್ತದೆ. ಈ ದಾವೆಯನ್ನು ನೋಡಿದಾಗ ಮೇಲ್ನೋಟಕ್ಕೆ ದಾವೆಯು ವಾದಿಯ ಪರವಾಗಿ ಇರುವುದು ಕಂಡುಬರುತ್ತದೆ. ಅನುಕೂಲತೆಯ ಒಲವು ವಾದಿಯ ಪರವಾಗಿ ಇರುವುದು ತಿಳಿದು ಬರುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿ ಸಂಖ್ಯೆ I ನ್ನು ವಜಾಗೊಳಿಸಿದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು ಈ ಎಲ್ಲಾ ಕಾರಣಗಳಿಂದ ಅಂಶ ನಂಃ 1 ರಿಂದ 3 ನ್ನು ಸಕರಾತ್ಮಕವಾಗಿ ಉತ್ತರಿಸಿದೆ.

17. ಅಂಶ ನಂಃ 4 ಃ ಈ ಮೇಲಿನ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಃಃಆದೇಶ ಃಃ**

ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ I ನ್ನು ಪುರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2019 ನೇ ಇಸವಿ ಜನವರಿ 25 ನೇ ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು. )

(ಮಹೇಂದ್ರ ಎಂ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜಗಳೂರು.